ಅಧ್ಯಕ್ಷರು: ಸಭೆಯ ಮುಂದೆ ಮಂಡಿಸಲಾಯಿತು.

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

ವಿಷಯ: (ಅ) 50ನೇ ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ಮಾಧ್ಯಮಗಳ ಮೂಲಕ ಸ್ವಾತಂತ್ರ್ಯ ಹೋರಾಟಗಾರರ ಜೀವನ ಚರಿತ್ರೆಯ ಪ್ರಸಾರ:

ಶ್ರೀಮತಿ ಎನ್.ಜ್ಯೋತಿರೆಡ್ಡಿ (ಗೌರಿಬಿದನೂರು): ಸನ್ಮಾನ್ಯ ಅಧ್ಯಕ್ಷರೆ, ನಾವು ಇವತ್ತು 50ನೇ ಸ್ವಾತಂತ್ರ್ಯ ಉತ್ಸವವನ್ನು ವರ್ಷಪೂರ್ತಿ ಆಚರಿಸಬೇಕೆಂಬ ನಿರ್ಧಾರವನ್ನು ಸರ್ಕಾರದ ವತಿಯಿಂದ ತೆಗೆದುಕೊಂಡಿದ್ದೇವೆ. ಕನಿಷ್ಟ ಪಕ್ಷ ಈ ವರ್ಷವನ್ನಾದರೂ ನಮ್ಮ ಮಾಧ್ಯಮಗಳು ಏನಿವೆ, ಸಿನಿಮಾ, ದೂರದರ್ಶನ, ರೇಡಿಯೋ ಅಂಥದ್ದರಲ್ಲಿ ಇಡೀ ವರ್ಷ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಪಟ್ಟ ಹಾಗೆ ಡಾಕ್ಯುಮೆಂಟರಿಗಳನ್ನು ಹಾಗೂ ಸ್ವಾಂತ್ರತ್ಯ ಹೋರಾಟಗಾರರ ಜೀವನ ಚರಿತ್ರೆಯ ಬಗ್ಗೆ ತೋರಿಸುವಂತಹ ಒಂದು ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡುವಂತಹ ಒಂದು ನಿರ್ಧಾರವನ್ನು ಸರ್ಕಾರ ತೆಗೆದುಕೊಳ್ಳಬೇಕು. ಇದಕ್ಕಾಗಿ ಒಂದು ಅರ್ಧಗಂಟೆ ಕಾಲಾವಧಿಯ ಚರ್ಚೆಗೆ ಅವಕಾಶ ಮಾಡಿ ಕೊಟ್ಟರೆ, ಎಲ್ಲಾ ಹಿರಿಯರ ಒಂದು ಮಾರ್ಗದರ್ಶನದಲ್ಲಿ ಅವರ ಸಲಹೆ ಮೇಲೆ ಇಂಥ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬಹುದು ಎಂದು ಹೇಳುತ್ತೇನೆ. ಏನು ಈ ಮಾಧ್ಯಮಗಳು ನಮ್ಮ ಸಮಾಜ, ಸಂಸ್ಕೃತಿ ದಿವಾಳಿತನದ ಕಡೆಗೆ ಕಂಡೀಶನಲ್ ಪೇಟ್ರಯಾಟಿಸಮ್ ಕಡೆ ಹೋಗುತ್ತಿದೆಅನ್ನತಕ್ಕ ಒಂದು ಭಾವನೆ ಜನರಲ್ಲಿ ಬರುತ್ತಿದೆ. ಅದನ್ನು ಹೋಗಲಾಡಿಸಲಿಕ್ಕೆ ಈ ಸದನ ಪೆಟ್ರಯಾಟಿಸಿಮ್ in the minds of youth ಬರಲು ಒಂದು ನಿರ್ಧಾರವನ್ನು ಸರ್ವಾನುಮತದಿಂದ ತೆಗೆದುಕೊಂಡು, ಈ ಮಾಧ್ಯಮಗಳ ಮೇಲೆ ಒತ್ತಾಯವನ್ನು ತಂದು, ಕಡ್ಡಾಯವಾಗಿ ಒಂದು ಗೊತ್ತುವಳಿಯನ್ನು ಇದರ ಬಗ್ಗೆ ಮಾಡಬೇಕು. ಹಿಂದೆ ನಾವು ಚಿಕ್ಕವರಿರುವಾಗ ಸಿನಿಮಾ ಶುರು ಆಗುವುದಕ್ಕೆ ಮುಂಚೆ ನ್ಯೂಸ್ ರೀಲನ್ನು ತೋರಿಸುತ್ತಿದ್ದರು. ಅದರಲ್ಲಿ ಈ ದೇಶಕ್ಕೆ ಸಂಬಂಧಪಟ್ಟ ಹಾಗೆ ಆಗಲಿ, ಅಥವಾ ರೈಟರ್ಸ್‌ಗಳ ಸ್ಥಳದ ಬಗ್ಗೆಯಾಗಲೀ, ತೋರಿಸುತ್ತಿದ್ದರು. ಈಗ ಅಂಥದ್ದು ಏನೂ ಇಲ್ಲ. ಎಲ್ಲವನ್ನು ಬಿಟ್ಟು ಬಿಟ್ಟಿದ್ದಾರೆ. ನೇರವಾಗಿ ಮೂವಿ ತೋರಿಸುತ್ತಾರೆ. ನಮಗೆ ದೂರದರ್ಶನಗಳಲ್ಲೂ ಬೇರೆ ಬೇರೆ ವಿಷಯಗಳನ್ನು ಹೆಚ್ಚು ತೋರಿಸುತ್ತಾರೆ. ಆದುದರಿಂದ ದಯವಿಟ್ಟು ಕಡ್ಡಾಯವಾಗಿ ಜನರಿಗೆ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ತೋರಿಸುವಂತಹ ವ್ಯವಸ್ಥೆಯನ್ನು ಸರ್ಕಾರದವತಿಯಿಂದ ತೆಗೆದುಕೊಂಡು ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

MR. SPEAKER: I must Congratulate you. It is a very good suggestion.

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ): ಮಾನ್ಯ ಅಧ್ಯಕ್ಷರೆ, ಇದೇ ವಿಷಯವನ್ನು ನಾನು ಹೋದ ಸಲ ಕೇಳಿದಾಗ ಅರ್ಧಗಂಟೆ ಕಾಲಾವಧಿ ಚರ್ಚೆಗೆ ಕೊಡುತ್ತೀರೆಂದು ಹೇಳಿದ್ದೀರಿ, ಈ ಸಿನಿಮಾ ಇನ್ನಿತರ ಮಾಧ್ಯಮಗಳು ನಮ್ಮ ವಿದ್ಯಾರ್ಥಿಗಳನ್ನು ಯಾವ ಕಡೆಗೆ ಕರೆದುಕೊಂಡು ಹೋಗುತ್ತಿದೆ ಎಂಬುದರ ಬಗ್ಗೆ ಕೂಲಂಕುಷವಾಗಿ ಚರ್ಚೆ ಆಗಬೇಕು ಎಂದು ನಾನೂ ಕೂಡ ಹೇಳಿದ್ದೆ, ಸನ್ಮಾನ್ಯ ವಾಟಾಳ್ ನಾಗರಾಜ್ ಅವರೂ ಸಹ ಹೇಳಿದ್ದರು. ಅಶ್ಲೀಲ ಸಿನಿಮಾಗಳು ಈ ಟಿವಿಗಳಲ್ಲಿ ಬರುವ ಬಗ್ಗೆ, ಇದು ಚರ್ಚೆಗೆ ಬಂದರೂ ಕಾರಣಾಂತರಗಳಿಂದ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ಈ ಸೆಷನ್ ಮುಗಿಯುವುದರೊಳಗೆ ಒಂದು ಗಂಟೆ ಆದರೂ ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಸಿನಿಮಾ, ಟಿವಿ, ಎಐಆರ್, ಪತ್ರಿಕೆ ಇವುಗಳ ಮುಖಾಂತರ ನಮ್ಮ ಮಕ್ಕಳಿಗೆ ಮತ್ತು ವಿದ್ಯಾರ್ಥಿಗಳಿಗೆ ಏನು ಹೇಳಬೇಕು ಮತ್ತು ಸಮಾಜದ ಸುಧಾರಣೆ ಬಗ್ಗೆ ಏನು ಹೇಳಬೇಕೂ ಎನ್ನುವುದು ಚರ್ಚೆ ಆಗಬೇಕು. ಇದರ ಬಗ್ಗೆ ಕೂಲಂಕುಷವಾಗಿ ಚರ್ಚೆ ಆಗಬೇಕು. ತಾವು ದಯಮಾಡಿ ಅದಕ್ಕೆ ಅವಕಾಶ ಕೊಡಬೇಕು. ಈ ವರ್ಷವನ್ನು ಸ್ವಾತಂತ್ರ್ಯದ ವರ್ಷ ಎಂದು ಘೋಷಣೆ ಮಾಡಿದ್ದೇವೆ. ಈ ಸುವರ್ಣ ಮಹೋತ್ಸವದ ವರ್ಷದಲ್ಲಿ ಇಡೀ ವರ್ಷ, ಸ್ವಾತಂತ್ರ್ಯ ಯೋಧರ ಬಗ್ಗೆ, ಅವರ ಚರಿತ್ರೆಯ ಬಗ್ಗೆ, ಎಲ್ಲಾ ಮಾಧ್ಯಮಗಳಲ್ಲಿ ಬರುವಂತೆ ಮಾಡಬೇಕು.

ಅಧ್ಯಕ್ಷರು: ಇದರಲ್ಲಿ ಒಂದು ಸಮಸ್ಯೆ ಇದೆ. ಜ್ಯೋತಿರೆಡ್ಡಿಯವರು ಹೇಳಿದರು, ತಾವು ಹೇಳಿದಿರಿ, ಇದನ್ನು ಪ್ರಚುರಪಡಿಸುವುದು ಒಂದು ಕಡೆಗೆ, ಇದೂ ಇದ್ದು ಈಗಿರುವ ಹೊಲಸೂ ಇದ್ದರೆ!

ಶ್ರೀಮತಿ ಪ್ರಮೀಳಾ ನೇಸರ್ಗಿ: ಹೊಲಸು ಹೋಗಬೇಕು. ಒಳ್ಳೆಯದು ಬರಬೇಕು. ಸದಾ ಕಾಲಕ್ಕೆ ನಿಲ್ಲಿಸಬೇಕು. ಈ ವರ್ಷವಾದರೂ ಅದಕ್ಕೆ ನಾಂದಿ ಹಾಡಬೇಕು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳು ಬಹಳ ಪ್ರಮುಖವಾದಂಥ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಟಿವಿ ಸೇರಿದಂತೆ ಈ ಪ್ರಸಾರ ಮಾಧ್ಯಮಗಳಲ್ಲಿ, ಏನೆಲ್ಲಾ ಅದರಲ್ಲಿ ಪ್ರಸಾರ ಆಗುತ್ತಿದೆ, ಅದರ ಪರಿಣಾಮಗಳು ಏನು ಮತ್ತು ಆ ಮಾಧ್ಯಮಗಳಲ್ಲಿ ಯಾವರೀತಿಯ ಕಾರ್ಯಕ್ರಮಗಳು ಪ್ರಸಾರವಾಗಬೇಕು, ಯಾವ ರೀತಿ ಆರೋಗ್ಯಕರವಾಗಿ ಇರಬೇಕು, ಎನ್ನತಕ್ಕಂಥದ್ದನ್ನು ಇಡೀ ರಾಷ್ಟ್ರಮಟ್ಟದಲ್ಲಿ ಒಂದು ಪಾಲಿಸಿಯನ್ನು ತರಬೇಕಾದರೆ, ನಮ್ಮ ಕರ್ನಾಟಕದ ಸದನದಿಂದಲೇ ಅದನ್ನು ಚರ್ಚೆಗೆ ಪ್ರಾರಂಭ ಮಾಡಬೇಕು. ಅದಕ್ಕೆ ತಾವು ದಯವಿಟ್ಟು ಒಂದು ದಿನವನ್ನು ನಿಗದಿ ಮಾಡಿದರೆ, ಪ್ರಸಾರ ಮಾಧ್ಯಮದ ಪಾಲಿಸಿಯನ್ನು ರೂಪಿಸಲಿಕ್ಕೆ ಒಂದು ಚರ್ಚೆಯನ್ನು ತಾವು ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕಾಗಿ ತಮ್ಮಲ್ಲಿ ಹೇಳುತ್ತೇನೆ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಈಗ

ಬಹಳ ಉತ್ತಮವಾಗಿರತಕ್ಕ ಸಲಹೆಯನ್ನು ಶ್ರೀಮತಿ ಜ್ಯೋತಿರೆಡ್ಡಿಯವರು ಹಾಗೂ ಪ್ರಮೀಳಾರವರು ಕೊಟ್ಟಿದ್ದಾರೆ. ಕೃಷ್ಣಾರೆಡ್ಡಿ ಅಲ್ಲ ಶ್ರೀರಾಮರೆಡ್ಡಿಯವರೂ ಕೊಟ್ಟಿದ್ದಾರೆ. ಅಲ್ಲ, ರಾಮ ಕೃಷ್ಣ ಎರಡೂ ಒಂದೇ ತಾನೇ? ರಾಮನ ಅವತಾರ ಶ್ರೀ ಕೃಷ್ಣ ಕೃಷ್ಣನ ಅವತಾರ ರಾಮ ಅಷ್ಟೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ರಾಮನ ಪರಂಪರೆ ಬೇರೆ, ಕೃಷ್ಣನ ಪರಂಪರೆ ಬೇರೆ ರಾಮ ಕೃಷ್ಣ ಒಂದೇ ಆಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಈಗ ಶ್ರಿ ರಾಮರೆಡ್ಡಿ ಪುಟ್ಟಣ್ಣಯ್ಯ ಇಬ್ಬರೂ ಒಂದೇನಾ?

ಶ್ರೀ ಎಂ.ಸಿ.ನಾಣಯ್ಯ: ಪೌರಾಣಿಕವಾಗಿ ಅವರಿಬ್ಬರದೂ ಒಂದೇ ಅವತಾರ.

ಶ್ರೀ ಹೆಚ್.ಎನ್.ನಂಜೇಗೌಡ: ಶ್ರೀರಾಮ ರೆಡ್ಡಿಯವರು ರಾಮನೂ ಅಲ್ಲ, ಕೃಷ್ಣನೂ ಅಲ್ಲ.

ಶ್ರೀ ಎಂ.ಸಿ.ನಾಣಯ್ಯ: ಈಗ ಸನ್ಮಾನ್ಯ ಅಧ್ಯಕ್ಷರೆ, ತಾವು ಏನಾದರೂ ಇದಕ್ಕೆ ಒಂದು ಗಂಟೆ ಅವಧಿಯ ಚರ್ಚೆಯನ್ನು ನಿಗದಿ ಮಾಡುವುದಿದ್ದರೆ, ಈ ಸದನ ಮುಗಿಯುವುದರ ಒಳಗೆ, ಚರ್ಚೆ ಮಾಡೋಣ.

ಶ್ರೀ ವಾಟಾಳ್ ನಾಗರಾಜ್: ಯಾವುದರ ಬಗ್ಗೆ ಚರ್ಚೆ ಮಾಡೋಣ?

ಶ್ರೀ ಎಂ.ಸಿ.ನಾಣಯ್ಯ: ಚರ್ಚೆ ಈ ಒಂದು ವರ್ಷ ನಮ್ಮ 50 ನೇ ಸ್ವಾತಂತ್ರ್ಯವರ್ಷವನ್ನು ಆಚರಿಸುತ್ತಿರುವ ಈ ವರ್ಷದಲ್ಲಿ ಇಡಿ ವರ್ಷ, ರಾಷ್ಟ್ರಪ್ರೇಮ ರಾಷ್ಟ್ರ ಭಕ್ತಿ ಮತ್ತು ಧೀರ ಯೋಧರ ಬಗ್ಗೆ ನಮ್ಮ ಮಕ್ಕಳಿಗೆ ತಿಳಿ ಹೇಳತಕ್ಕ ವಿಚಾರವನ್ನು ಮಾಧ್ಯಮಗಳ ಮುಖಾಂತರ, ದೂರದರ್ಶನದ ಮುಖಾಂತರ, ಚಲನಚಿತ್ರಗಳ ಮುಖಾಂತರ ಒಂದು ಗಂಟೆ, ಅರ್ಧ ಗಂಟೆ ಅವರ ಮನಸ್ಸಿನಲ್ಲಿ ಉಳಿಯುವಂತೆ ಅವರಿಗೆ ಉತ್ತೇಜನ ಕೊಡುವಂಥ ರೀತಿಯಲ್ಲಿ ಮಾಡಬೇಕು. ಮತ್ತು ಅಶ್ಲೀಲತೆಯನ್ನು ಲೈಂಗಿಕತೆಯನ್ನು ದೂರ ಮಾಡಬೇಕು ಎಂದು ಪ್ರಮೀಳಾರವರು ಹೇಳಿದರು. ಅದಕ್ಕೆ ಸಭಾಧ್ಯಕ್ಷರು ಹೇಳಿದರು, ಸುಮಾರು ಒಂದು ವರ್ಷ ಚಲನಚಿತ್ರ ಪ್ರದರ್ಶನವನ್ನೇ ನಿಲ್ಲಿಸಬೇಕಾಗುತ್ತದೆ. ಅದರ ಬಗ್ಗೆ ಚಿಂತನೆ ಮಾಡಬೇಕು ಎನ್ನುತಕ್ಕಂಥದ್ದು ಅವರ ಒಂದು ಸಲಹೆ. ಅದಕ್ಕೆ ಒಂದು ಗಂಟೆ ಚರ್ಚೆಗೆ ತಾವೆಲ್ಲಾ ಒಪ್ಪುತ್ತೀರಾ ಎಂದು ನನ್ನ ಭಾವನೆ.

ಶ್ರೀ ವಾಟಾಳ್ ನಾಗರಾಜ್: ಶ್ರೀರಾಮರೆಡ್ಡಿಯವರು ಬ್ರಹ್ಮಚಾರಿಗಳಾಗಿರುವುದರಿಂದ ಅವರಿಗೆ ಶೀಲ ಮತ್ತು ಅಶ್ಲೀಲದ ಬಗ್ಗೆ ಜ್ಞಾನವೇ ಇಲ್ಲ. ಅವರಿಗೆ ಅದರ ಬಗ್ಗೆ ಮಾತನಾಡುವುದಕ್ಕೆ, ಅಧಿಕಾರವೇ ಇಲ್ಲ.

ಅಧ್ಯಕ್ಷರು: ವಿಷಯವನ್ನು ಬಿಟ್ಟು ಹೋಗುವುದು ಬೇಡ. ವಿಷಯದ ಗಂಭೀರತೆಯನ್ನು ಕಳೆಯುವುದು ಬೇಡ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಾನು ಏನು ಹೇಳಿದೆ ಎನ್ನುವುದನ್ನು ವಾಟಾಳ್‌ರವರು ಕೇಳಿಸಿಕೊಳ್ಳಲೇ ಇಲ್ಲ.

ಅಧ್ಯಕ್ಷರು: ವಿಷಯದ ಗಂಭೀರತೆಯನ್ನು ಕಳೆಯುವುದು ಬೇಡ. ನಾನು ವಿರೋಧಪಕ್ಷದ ನಾಯಕರಲ್ಲಿ, ಸಂಸದೀಯ ಸಚಿವರಲ್ಲಿ, ಮತ್ತು ಇತರೇ ಎಲ್ಲಾ ವಿರೋಧಪಕ್ಷಗಳ ಮುಖಂಡರಲ್ಲೂ ಮನವಿ ಮಾಡಿಕೊಳ್ಳುತ್ತೇನೆ. ಪ್ರಸ್ತುತ ಸದನದಲ್ಲಿ ನಾವು ಕೆಲವು ವಿಷಯಗಳನ್ನು ಚರ್ಚಿಸುವಾಗ ಅನೇಕ ಸಲ ಜಿಜ್ಞಾಸೆಗೆ ಒಳಗಾಗಿದ್ದೇವೆ. ಸಮಾಜಕ್ಕೆ ಸಂಬಂಧಿಸಿದಂತೆ ತೀವ್ರವಾಗಿ ನಮ್ಮ ಗಮನವನ್ನು ಸೆಳೆಯುವಂತೆ ಕೆಲವು ವಿಚಾರಗಳನ್ನು ಒಂದು ದಿವಸ ಅಥವಾ ಎರಡು ದಿವಸ ಬೇರೆ ಯಾವುದೇ ಕಾರ್ಯಕಲಾಪಗಳನ್ನು ಇಟ್ಟುಕೊಳ್ಳದೆ, ಈ ವಿಷಯಗಳನ್ನು ಮಾತ್ರ ಪ್ರಸ್ತಾಪ ಮಾಡಬೇಕು ಎನ್ನುವುದು ನನ್ನ ಅಪೇಕ್ಷೆ. ಇದಕ್ಕೆ ತಾವೆಲ್ಲರೂ ಸಹಕರಿಸುತ್ತೀರೆಂದು ನನ್ನ ನಂಬಿಕೆ.

ಶ್ರೀ ಬಿ.ಎನ್.ಯಡಿಯೂರಪ್ಪ: ಲೋಕಸಭೆಯಲ್ಲೂ ಸಹ 3-4 ದಿವಸ ವಿಶೇಷ ಅಧಿವೇಶನ ಮಾಡಲು ನಿರ್ಧರಿಸಿದ್ದಾರೆ. ನಮ್ಮಲ್ಲೂ ಸಹ ಅನೇಕ ಪ್ರಮುಖವಾದ ವಿಷಯಗಳ ಬಗ್ಗೆ ಕೊಶ್ಚನ್ ಅವರ್ ಎಲ್ಲಾ ತಡೆಹಿಡಿದು.....

ಅಧ್ಯಕ್ಷರು: ನಮ್ಮ ನಿಗದಿತ ಕಲಾಪಗಳನ್ನೆಲ್ಲಾ ಸೇರಿಸಿ, ಕಡೆಗ ಎರಡು ಅಥವಾ ಮೂರು ದಿವಸ ನಮ್ಮ ಸಮಾಜವನ್ನು ತೀವ್ರವಾಗಿ ಕಾಡುತ್ತಿರುವ ಕೆಲವು ಸಮಸ್ಯೆಗಳ ಬಗ್ಗೆ ನಿರ್ವಂಚನೆಯಿಂದ ನಮ್ಮನ್ನು ನಾವೇ ಒಂದು ರೀತಿಯ ಆತ್ಮ ಶೋಧನೆಗೆ ಒಳಪಡಿಸಿಕೊಂಡು, ಎಲ್ಲರೂ ಕೂಡ ನಿರ್ವಿಕಾರ ಮನೋಭಾವನೆಯಿಂದ ಮಾತನಾಡುವುದಕ್ಕೆ ಅವಕಾಶ ಮಾಡಿಕೊಂಡು, ಎರಡು ಮೂರು ದಿವಸ ಈ ರೀತಿಯ ವಿಚಾರಗಳನ್ನು ಸಂಸದೀಯ ವ್ಯವಹಾರಗಳ ಸಭೆಯಲ್ಲಿ ಕುಳಿತು ಚರ್ಚೆ ಮಾಡೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅಧ್ಯಕ್ಷರೇ, ತುಂಬ ಒಳ್ಳೆಯ ಸಲಹೆಯನ್ನು ತಾವು ಕೊಟ್ಟಿದ್ದೀರಿ. ಪ್ರಶ್ನೆ ಪತ್ರಿಕೆಗಳ ಹಗರಣದಲ್ಲಿ ಇರಬಹುದು, ಈ 50 ವರ್ಷದ ಅನುಭವದಲ್ಲಿ ಆ ರೀತಿ ಕೆಲವು ಪ್ರಮುಖವಾದ ವಿಷಯಗಳ ಬಗ್ಗೆ ಈಗ ತಾನೇ ಕೆಲವು ಮಹಿಳಾ ಸದಸ್ಯರು ಪ್ರಸ್ತಾಪ ಮಾಡಿದಂಥ ವಿಷಯಗಳ ಬಗ್ಗೆ ಗಂಭೀರವಾಗಿ ಚರ್ಚೆಮಾಡುವುದಕ್ಕಾಗಿ ತಾವು 2-3 ದಿವಸ ವಿಶೇಷವಾದಂಥ ಅವಕಾಶವನ್ನು ಕೊಡಬೇಕು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಾನು ಹೇಳುವುದೇನೆಂದರೆ, ನಮ್ಮ ಸದನದಿಂದಲೇ ಆ ಚರ್ಚೆ ಪ್ರಾರಂಭವಾಗಿ, ರಾಷ್ಟ್ರಮಟ್ಟದ ಒಂದು ನೀತಿ ನಿರೂಪಣೆಗೆ ಮಾರ್ಗದರ್ಶನವಾಗಲಿ ಎಂದು.

ಅಧ್ಯಕ್ಷರು: ಆಯಿತು, ಮಾಡೋಣ.

ಆ) ಸ್ಟೇಟ್ ಇಂಟಲಿಜೆನ್ಸ್ ಬ್ಯೂರೋದವರು ಸದಸ್ಯರ, ಪತ್ರಿಕೊದ್ಯಮಿಗಳ ಚಲನವಲನದ ಬಗ್ಗೆ ಕಣ್ಣಿಟ್ಟಿರುವುದು.

+ ಶ್ರೀಮತಿ ಪ್ರಮೀಳ ನೇಸರ್ಗಿ: ಅಧ್ಯಕ್ಷರೇ ನಾನು ತಮ್ಮ ಅನುಮತಿಯನ್ನು ಒಂದು ಮುಖ್ಯವಾದ ವಿಷಯದ ಬಗ್ಗೆ ಪ್ರಸ್ತಾಪಿಸಲು ಕೇಳಿದ್ದೆ. ಒಂದು ಬಹಳ ಗಂಭೀರವಾದಂಥ ವಿಷಯ ಪತ್ರಿಕೆಯಲ್ಲಿ ಬಂದಿದೆ. ಅದೇನೆಂದರೆ, "SIB Keeps tab of journalists" ಅಂದರೆ ಸ್ಟೇಟ್ ಇಂಟಲಿಜೆನ್ಸ್ ಬ್ಯೂರೋದವರು ಈ ಸಭೆಯಲ್ಲಿರತಕ್ಕಂಥ ಸದಸ್ಯರ ಮೇಲೆ, ಪತ್ರಿಕೋದ್ಯೋಗಿಗಳ ಮೇಲೆ, ಅವರ ಚಲನವಲನಗಳ ಮೇಲೆ ಕಣ್ಣು ಇಟ್ಟಿದೆ. ವಿಧಾನಸೌಧದ ಒಳಗಡೆಗೆ ಪಾಸ್‌ಗಳನ್ನು ಇಲ್ಲದೆ ಬಿಡುತ್ತಿದ್ದಾರೆ ಎನ್ನತಕ್ಕಂಥ ಗಂಭೀರವಾದ ವಿಷಯ ಬಂದಿದೆ. ನಾವು ಇಲ್ಲಿ ಸ್ವತಂತ್ರವಾಗಿ ಕೆಲಸ ಮಾಡಬೆಕಾದರೆ, ನಾವು ಶಾಸಕರು ತಮ್ಮ ಕೆಲಸ ಮಾಡಬೇಕಾದರೆ, ಪತ್ರಿಕೋದ್ಯೋಗಿಗಳು ಸ್ವಾತಂತ್ರದಿಂದ ಕೆಲಸ ಮಾಡಬೇಕಾದರೆ ಅವರ ಚಲನವಲನಗಳ ಮೇಲೆ ಈ ವಿಧಾನಸೌಧದ ಲಾಬಿಗಳಲ್ಲಿ ಕಣ್ಣು ಇಟ್ಟರೆ ನಾವು ಹೇಗೆ ಕೆಲಸ ಮಾಡಬೇಕು? ತಾವು ಇದರ ಬಗ್ಗೆ ಗಂಭೀರವಾಗಿ ಪರಿಶೀಲಿಸಬೇಕು. ಬ್ಯಾಡ್ಜ್‌ಗಳು ಇಲ್ಲದೆ ಇರುವವರಿಗೆ ಪಾಸ್ ಕೊಡುತ್ತಿದ್ದಾರೆ ಎನ್ನತಕ್ಕಂಥ ವಿಷಯ ಕೂಡ ಬಂದಿದೆ. ಇದು ಬಹಳ ಗಂಭೀರವಾದ ವಿಷಯ. ನಮ್ಮ ಶಾಸಕರ ಕಾರ್ಯಾಲಯದಿಂದಲೇ ಈ ರೀತಿಯಾಗುತ್ತಿದೆ ಎಂದರೆ ನಾವು ಹೇಗೆ ಕೆಲಸ ಮಾಡಬೇಕು ಎನ್ನುವುದರ ಕಡೆಗೆ ತಾವು ಗಮನ ಹರಿಸಬೇಕು. ಅಧ್ಯಕ್ಷರೇ, ನಾನು ಎರಡು ಪ್ರಶ್ನೆಗಳನ್ನು ಕೇಳುತ್ತಿದ್ದೇನೆ, ಬ್ಯಾಡ್ಜಸ್ ಇಲ್ಲದೆ ಈ ಲಾಬಿಯೊಳಗೆ ಬಿಡುತ್ತಿದ್ದಾರಾ? ಅಸೆಂಬ್ಲಿ ಲಾಬಿಯೊಳಗೆ ಆ ಕಡೆ, ಈ ಕಡೆ ಮತ್ತು ಪತ್ರಿಕೋದ್ಯೋಗಿಗಳು ಕುಳಿತುಕೊಳ್ಳತಕ್ಕಂಥ ಸ್ಥಳದಲ್ಲಿ ಬ್ಯಾಡ್ಜಸ್ ಇಲ್ಲದೇ ಇರುವವರನ್ನು, ಪತ್ರಿಕೋದ್ಯೋಗಿಗಳು ಅಲ್ಲದವರನ್ನು ಸ್ಟೇಟ್ ಇಂಟೆಲಿಜೆನ್ಸ್, ಬ್ಯೂರೋನವರು ಆ ನೆಪದಲ್ಲಿ ಒಳಗೆ ಬಂದು ಕುಳಿತುಕೊಂಡು ನಾವು ಆ ಕಡೆ ಈ ಕಡೆ ಏನು ಮಾತನಾಡುತ್ತೇವೆ ಎನ್ನುವುದನ್ನು ಕೇಳಿಕೊಂಡು, ನಾವು ಹೋಗಿಬರತಕ್ಕ ಚಲನವಲನವನ್ನು ಗಮನಿಸುತ್ತಿದ್ದಾರೆ ಎಂದರೆ ಇದು ದುಃಖಕರವಾದಂಥ ವಿಷಯ. ನಿಜವಾಗಿಯೂ ನಮ್ಮ ಹಕ್ಕುಬಾಧ್ಯತೆಗಳಿಗೆ ಚ್ಯುತಿ ಬಂದಿದೆ. ಸ್ಟೇಟ್ ಲೆಜಿಸ್ಲೇಚರ್ ಸೆಕ್ರೆಟೇರಿಯಟ್‌ನಿಂದಲೇ ಈ ರೀತಿ ಮಾಡುತ್ತಿದ್ದಾರೆ ಎಂದರೆ ನಮಗೆ ಬಹಳ ದುಃಖವಾಗುತ್ತಿದೆ. ಆದ್ದರಿಂದ, ತಮ್ಮ ಗಮನಕ್ಕೆ ತರುತ್ತಿದ್ದೇನೆ, ಇದನ್ನು ಗಂಭೀರವಾಗಿ ಪರಿಗಣಿಸಬೇಕು, ಇದರಿಂದ ಏನಾಗುತ್ತದೆ ಎಂದು ನೀವು ಯೋಚನೆ ಮಾಡಬೇಕು. ಬ್ಯಾಡ್ಜ್ ಇಲ್ಲದವರಿಗೆ ಯಾರ್ಯಾರಿಗೆ ಪಾಸ್‌ಗಳನ್ನು ಕೊಡುತ್ತಿದ್ದಾರೆ, ಬ್ಯಾಡ್ಜ್ ಇಲ್ಲದೆ ಇಲ್ಲಿ ಯಾರು ಕುಳಿತುಕೊಂಡಿದ್ದಾರೆ, ಅವರೆಲ್ಲರನ್ನೂ ಕೂಡ ಹೊರಗೆ ಕಳುಹಿಸತಕ್ಕಂಥ ಕೆಲಸವನ್ನು ತಾವು ಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ.